46/3
9

doc-352
T.P-2

(1)

R No KRNN 12 15-10-1974

in 58 th Year ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ಥ ಜಾತಪ್ರಿಕ ಎಂ. ಎಸ್. ಕೃಷ್ಣರಾವ್ (3 ಪೈಸೆ

# ಮೈಸೂರು ಪೌರಸಭೆಯ ಕರ್ತವ್ಯ ಲೋಪದಿಂದ ಎರಡು ಕಡೆ ದುರ್ಘಟನೆಗಳು

ಮೈಸೂರು 15 — ಟನ್‌ಹಾಲ್ ಬಳಿ ಸಿಲ್ವರ್ ಜ್ಯೂಬಿಲಿ ಕ್ಲಾಕ್ ಟವರ್ ಇದೆಯಷ್ಟೆ. ಅದರ ಬಳಿ ಸಣ್ಣದೊಂದು ಚರಂಡಿ ಇದೆ. ಆ ಚರಂಡಿಗೆ ಅರ್ಧ ಮಾತ್ರ ಸಲಾಕೆಯಿಂದ ಮುಚ್ಚಿದೆ ಅರ್ಧ ಭಾಗ ತೆರೆದಿದೆ. ನಿನ್ನೆ ರಾತ್ರಿ ಸುಮಾರು 8 ಘಂಟೆ ಸಮಯದಲ್ಲಿ ಮಹಿಳೆಯೋರ್ವರು ಆ ಕಡೆ ನಡೆದು ಬರುತ್ತಾ, ಅರ್ಧ ತೆರೆದ ಚರಂಡಿಯೊಳಗೆ ಕಾಲಿಟ್ಟುದೇ ತಡ ಮುಖ ಕೆಳಗಾಗಿ ಬಿದ್ದು ಗೋಳಾಡಿದರು. ಮುಂದಿನ ಎರಡು ಹಲ್ಲುಗಳು ಉಳ್ಳಾಡುತ್ತಿವೆ, ನೋವಾಗುತ್ತಿದೆ ಎಂದು ನಮ್ಮ ಪ್ರತಿನಿಧಿಗೆ ಹೇಳಿ, ನಮ್ಮ ಪ್ರತಿನಿಧಿ ಅವರ ಬಗ್ಗೆ ವಿವರ ಪಡೆಯುವಷ್ಟರಲ್ಲಿ ರಿಕ್ಷಾ ಮಾಡಿಕೊಂಡು ಅವರು ಹೊರಟು ಹೋದರು.

★

ಸಿಲ್ವರ್ ಜ್ಯೂಬಿಲಿ ಕ್ಲಾಕ್ ಟವರ್‌ನಿಂದ ಜೆಂಗಳೂರು ಕಡೆ ರಸ್ತೆಗೆ ಬಂದರೆ ರಿಟ್ಸ್ ಹೋಟೆಲ್‌ಗೆ ತಿರುಗುವ ಕಡೆ ಒಳ ಚರಂಡಿ ಮುಚ್ಚಲು ಮಂದವಾದ ಹಾಗೂ ಅಗಲವಾದ ಕಾಡುಗಲ್ಲು ಹೊದಿಸಿದೆ. ನಿನ್ನೆ ಸಂಜೆ ಸುಮಾರು 7 ಗಂಟೆ ವೇಳೆಯಲ್ಲಿ ರಸ್ತೆಯ ದೀಪ ನಂದಿಹೋಗಿ ಕತ್ತಲೋ ಕತ್ತಲು ಎದುರಿಗೆ ಪಾನಿಪೂರಿ ಮಾರುವ ಗಾರನ ಮಂಕಾದ ಪೆಟ್ರೋಮಾಕ್ಸ್ ದೀಪ ಮತ್ತು ಸಮೀಪದ ಕಡಲೇಕಾಯಿ ಬಟಾಣಿ ಅಂಗಡಿಯವನ ಕೈಯ್ಯಡ ಬಿಟ್ಟರೆ ಬೇರೆ ಬೆಳಕಿಲ್ಲ ಆ ಹೊತ್ತಿನಲ್ಲಿ ಸುಮಾರು ಹನ್ನೆರಾಲ್ಕು ವರ್ಷದ ಬ್ರಾಲಕ ಸೈಕಲ್‌ನಲ್ಲಿ ಬಂದವನೇ ಕಾಡುಗಲ್ಲಿನ ಹತ್ತಿರ ಸೈಕಲ್ ತರಲು, ಆ ಬಾಲಕ ಸೈಕಲ್ ಸಮೇತ ಕೆಳಗೆ ಬಿದ್ದ. ದೈವವಶಾತ್ ಹೆಚ್ಚಿಗೆ ಮಾತ್ರ ಆ ಬಾಲಕನಿಗೆ ಗಾಯವಾಯಿತು

---

### ಕೇರಳ ಶಾಸನ ಸಭೆಯಲ್ಲಿ ಪಾದರಕ್ಷೆಗಳಲ್ಲಿ ಹೊಡೆದಾಟ

ನಿನ್ನೆ ಕೇರಳ ಶಾಸನ ಸಭೆ ಶಾಂತಿಯುತವಾಗಿ ಪ್ರಾರಂಭವಾಗಿ ಅನಂತರ ಬಿಸಿ ವಾತಾವರಣ ಉಂಟಾಯಿತೆಂದು ತಿರುವೇಂದ್ರಂನ ವಾರ್ತೆ ತಿಳಿಸುತ್ತದೆ ಅದರ ಪರಿಣಾಮವಾಗಿ ಸದಸ್ಯರು ಪಾದರಕ್ಷೆಯನ್ನು ಪರಸ್ಪರ ಪ್ರಯೋಗಿಸಿದರು ಐದಾರು ಮಂದಿ ಗಾಯಗೊಂಡರು. ಸಭೆ ಮುಂಗಳವಾರಕ್ಕೆ ಮುಂದುವರಿಯಿತು

★

### ಕಾಂಗ್ರೆಸ್‌ನ ಪುನಶ್ಚೇತನಕ್ಕಾಗಿ ಸಭೆ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಎಫ್. ಪಾಟೀಲರು ತಾಜ್ಯಾದ್ಯಂತ ಜಿಲ್ಲ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರ ಹಾಗೂ ಕಾರ್ಯದರ್ಶಿಗಳ ಸಭೆಯನ್ನು ಈ ತಿಂಗಳು 23 ನೇ ತಾ. ಹುಬ್ಬಳ್ಳಿಯಲ್ಲಿ ಕರೆದಿರುವರು. ಸಂಸ್ಥೆ ಪುನಶ್ಚೇತನಕ್ಕೆ ಈ ಸಭೆ

★

### ಸಿಂಹಿಣಿ ಹಾವನ್ನು ಕೊಂದಿತು

ಮೈಸೂರು— ಜೂನಲ್ಲಿಯ ಸಿಂಹಿಣಿ ಸೀತಾ ಸೋಮವಾರ ರಾತ್ರಿ ತನ್ನ ಮರಿಗಳೊಡನೆ ವಿಶ್ರಾಂತಿಯುಲ್ಲಿದ್ದಾಗ ಪಂಜರದೊಳಗೆಬಂದ ಒಂದು 4 ಅಡಿ ಹಾವನ್ನು ಕೊಂದಿತು.

### ಜಯಪ್ರಕಾಶರ ಮುಂದಿನ ಕಾರ್ಯಕ್ರಮ

ಪಾಟ್ನಾ— ಮಂತ್ರಿಮಂಡಲ ಹೊರದೂಡುವ ಮತ್ತು ಶಾಸನಸಭೆ ವಿಸರ್ಜಿಸುವ ಬಗ್ಗೆ ನಡೆಸಲಾದ ಬಿಹಾರಿನ ಚಾರಿತ್ರಾರ್ಹ ಬಂದ್ ನಂತರ ಬಿಡದೆ ಮುಂದುವರಿಸುವ ನಾಲ್ಕು ಕ್ರಿಯಾಕ್ರಮವನ್ನು ಶ್ರೀ ಜಯಪ್ರಕಾಶ ನಾರಾಯಣರು ಪ್ರಕಟಿಸಿರುವರು — ನವೆಂಬರು 4 ರ ನಂತರವೂ ಅಂದರೆ ಸಾಮೂಹಿಕ ಪ್ರದರ್ಶನಕ್ಕೆ ಕರೆಕೊಟ್ಟಿರುವ ದಿನ — ನಂತರವೂ ಶಾಸದಸಭೆಯು ವಿಸರ್ಜಿಸಲ್ಪಡದಿದ್ದರೆ, ಜನತಾ ಶಾಸನಸಭೆಯ ಕರೆಗೆ ಮಾರ್ಗ ಕೈಗೊಳ್ಳಲಾಗುವುದು — ಜನರ ಕೇಳಿಕೆಯಂತೆ ಶಾಸನಸಭೆಗೆ ರಾಜೀನಾಮೆ ಕೊಟ್ಟಿರುವವರು, ಅವರವರ ಕ್ಷೇತ್ರಗಳಿಂದ ಈ ಸಭೆಯಲ್ಲಿ ಪ್ರತಿನಿಧಿಗಳಾಗಿರುವರು.

★

### ಕಳುವು ಮಾಡಿದ ಮುಖ್ಯನ್ಯಾಯಾಧೀಶರು

ಜಪಾನಿನ ಪುಕುಷಿಮಾ ಜಿಲ್ಲಾ ಕೋರ್ಟಿನ ಮುಖ್ಯ ನ್ಯಾಯಾಧೀಶರು ಸೆಪ್ಟಂಬರ 22 ರಂದು ರೂ 10000 ರ್ಯೆ ಪದಾರ್ಥಗಳನ್ನು ಕದಿಯುತ್ತಿದ್ದಾಗ ಹಿಡಿಯಲ್ಪಟ್ಟು, ತಮ್ಮ ಪದವಿಗೆ ರಾಜೀನಾಮೆ ಕೊಟ್ಟರು — ಈ ಪ್ರಸಂಗ ನಡೆದಾಗ ಅವರು ಮಿತಿಮೀರಿ ಕೆಲಸಮಾಡಿ ಮನಸ್ಸಿಗೆ ತುಂಬಾ ತೊಂದರೆಯಾಗಿದ್ದ ಕಾರಣ ಅವರ ಮೇಲೆ ಮೊಕದ್ದಮೆ ಹಾಕಲಿಲ್ಲ.

★

### ಪತ್ರಿಕೋದ್ಯೋಮಿಗಳ ಪ್ರತಿಭಟನೆ

ಮಂಲೇಷಿಯಾ ಪತ್ರಿಕೋದ್ಯೋಮಿಗಳ ರಾಷ್ಟ್ರೀಯ ಸಂಘವು, ಚೀಣೀಪತ್ರಿಕೆಗಳ ನಾಲ್ವರು ನ್ಯಾಯಕರನ್ನು, ಸಂಘಕ್ಕೆ ಅಪಾಯಕಾರಕ ಕಾರ್ಯಮೆಸಗಿದ ಆಪಾದನೆಗಾಗಿ ಹೊರದೂಡಿದ್ದನ್ನು ಪ್ರತಿಭಟಿಸಿ 43ನುಂದಿ ರಾಜೀನಾಮೆ ಕೊಟ್ಟು, ಕಾರ್ಯಕಾರಿ ಸಮಿತಿಯು ಅಧಿಕಾರ ದುರುಪಯೋಗವಾಗಿದೆಯೆಂದು ತಿಳಿಸಿದರು.

### ಉಪಾಧ್ಯಾಯರ ಸಂಯುಕ್ತ ಸಂಘ

ಬೆಂಗಳೂರು— ರಾಜ್ಯದ ಅನೇಕ ಉಪಾಧ್ಯಾಯರ ಸಂಘಗಳ ಸಂಯುಕ್ತ ಸಂಘವು ಸ್ಥಾಪಿಸಲಾಯಿತು — ಉಪಾಧ್ಯಾಯರ ಕುಂದುಕೊರತೆ ಬಗ್ಗೆ ಗಮನ ಸೆಳೆಯಲು ಚಳವಳದ ಅಂತಸ್ತಂತಸ್ತು ಕಾರ್ಯಕ್ರಮವನ್ನು ಸಂಘ ಕೈಗೊಳ್ಳುವುದೆಂದು ಇದರ ಅಧಿಕಾರಿಗಳು ಪತ್ರಿಕೆಯವರಿಗೆ ತಿಳಿಸಿದರು — ಪ್ರಥಮತಃ ತಾ || 28 ರ ಪರೀಕ್ಷಾ ಕಾರ್ಯವೂ ಸೇರಿ ಎಲ್ಲಾ ಕೆಲಸಗಳನ್ನೂ ಬಹಿಷ್ಕರಿಸಲು ತಿಳಿಸಲಾಗುವುದೆನ್ನಲಾಗಿದೆ.

★

### ಹೀನಾಮಾನ ಕಾರ್ಯ

ಲಂಡ್ — ಬ್ರಿಟಿಷ್ ಕಾರ್ಪೆಟ್ ತಯಾರಿಕೆ ಸಂಘದ ಅಧ್ಯಕ್ಷ ಮತ್ತು ಭಾರತದ ಒಬ್ಬ ಮಾಜಿ ಮುಖ್ಯನ್ಯಾಯಾಧೀಶರ ಪುತ್ರ 60 ವರ್ಷದ ಲಾರ್ಡ್ ಸ್ಪೆನ್ಸ್‌ನು ಸಂಘದ 15|300 ಪೌಂಡುಗಳ ಕಳವು ಮತ್ತು ಮೋಸದ ಆಪಾದನೆಗಾಗಿ 2 ವರ್ಷ ಜೈಲುವಾಸ ವಿಧಿಸಲ್ಪಟ್ಟನು.

★

### ಜಗದ್ಗುರುಗಳ ನುಡಿ

ಕಲ್ಕತ್ತಾ— ದೇಶದಲ್ಲಿ ನೈತಿಕ ಮಟ್ಟ ಪತನಗೊಂಡಿರುವುದರಿಂದ ದೇಶದಲ್ಲಿಯ ಹುಸ್ಥಿತಿಗೆ ಕಾರಣವಾಗಿದೆಯೆಂದು ಕಂಚಿ ಕಾಮಕೋಟಿ ಪೀಠದ ಜಗದ್ಗುರುಗಳವರು ಅವರ ಗೌರವಾರ್ಥ ಏರ್ಪಡಿಸಿದ್ದ ಸಮಾರಂಭದಲ್ಲಿ ಹೇಳಿದರು.

★

### ಷೇಕ್ ಅಬ್ದುಲ್ಲರೊಡನೆ ಮಾತುಕತೆ ಬೇಡ

ಕೊಚ್ಚಿ— ಜಮ್ಮು-ಕಾಶ್ಮೀರ ವಿಷಯದಲ್ಲಿ ಕೇಂದ್ರ ಸರಕಾರವು ಷೇಕ್ ಅಬ್ದುಲ್ಲರೊಡನೆ ಮಾತುಕತೆ ನಿಲ್ಲಿಸಬೇಕೆಂದು ಜನಸಂಘದ ಅಧ್ಯಕ್ಷ ಶ್ರೀ ಎಲ್. ಕೆ. ಅಡ್ವಾನಿ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು.

ಮಧ್ಯಕಾಲೀನ ಗೋಪುರದಲ್ಲಿ ಬರಹಗಾರ ಕುಟುಂಬ

ಹೀಲ್‌ಬ್ರೋನ್ (ಜರ್ಮನಿ)— ತಿಪುಸಂಖ್ಯಾತ ಕಪ್ಪು ದಂಪತಿಗಳು ಹೀನ್ಸ್ ಮತ್ತು ನೇರಾ ಮಟಿನ್ಬೋರ್ ತಮ್ಮ ಮೂರು ಮಕ್ಕಳೊಡನೆ 750 ವರ್ಷ ಹಳೆಯ ದಾಖಲೆಯ ಗೋಪುರದಲ್ಲಿ ವಾಸಿಸುತ್ತಿದ್ದಾರೆ ; ಇದಕ್ಕೆ 168 ಮೆಟ್ಟಿಲುಗಳಿವೆ ; ಇದರಲ್ಲಿರುವ ಪುರಾತನ ಕಾಲದ ಗಂಟೆಯನ್ನು ದಿನಕ್ಕೆ ನಾಲ್ಕು ಸಾರಿ ಜಾತಿ ಸೂಚಕ ಸಂದ್ರಾಯವಾಗಿದ್ದು ಅದನ್ನು ಹೀನ್ಸ್ ಪರಿವಾಲಿಸುವುದರಿಂದ ಅವರು ಬಾಡಿಗೆ ಕೊಡಬೇಕಾಗಿಲ್ಲ. ಈ ದಂಪತಿಗಳು ಅಲ್ಲಿ ಒಂದು ಕಲಾಮಂಟಪವನ್ನು ಸಂದರ್ಶಕರಿಗಾಗಿ ನಿರ್ಮಿಸಲಿದ್ದಾರೆ. ಈ ಹಿಂದಿನ ಕಾಲದಲ್ಲಿ ವೈರಿಗಳು ಬಂದಾಗ ಈ ಗೋಪುರದಲ್ಲಿ ಎಚ್ಚರಿಸುವ ಸಲುವಾಗಿ ಇದರ ನಿರ್ಮಾಣವಾಗಿತ್ತು. (ಯು ಪಿ ಎಸ್)

★

ರೈತ ಮತ್ತು ಕಾರ್ಮಿಕ ಸೇವಾ ಸಂಘ

ರೈತ ಮತ್ತು ಕಾರ್ಮಿಕ ಸೇವಾಸಂಘದ ಅಧ್ಯಕ್ಷರಾದ ಶ್ರೀ ಕೆ. ಪಿ. ಜಂಬೂಗೌಡರ ಅಧ್ಯಕ್ಷತೆಯಲ್ಲಿ ಸೇರಿದ್ದ, ರೈತ ಮತ್ತು ಕಾರ್ಮಿಕ ಸೇವಾ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ, ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್‌ರವರ ನಿಧನದ ಬಗ್ಗೆ ಸಂತಾಪಸೂಚಿಸಲಾಯಿತು; ಸಭೆ ಮತ್ತೊಂದು ನಿರ್ಣಯ ಅಂಗೀಕರಿಸಿ ಭಾರತದ ಹಿತದೃಷ್ಟಿಯಿಂದ ಶ್ರೀ ಜಯಪ್ರಕಾಶ ನಾರಾಯಣರ ಶಾಂತಿಯುತ ಚಳವಳಿಗೆ ಭಾರತದ ಸರ್ವತೋಮುಖ ಬೆಂಬಲಿಸಬೇಕೆಂದೂ, ಶ್ರೀಮತಿ ಇಂದಿರಾಗಾಂಧಿರವರೆ ಪ್ರಧಾನಿ ಪದವಿಗೆ ರಾಜೀನಾಮೆ ಕೊಡುವಂತೆ ಸರ್ವರೂ ಒತ್ತಾಯಪಡಿಸಬೇಕೆಂದು ತಿಳಿಸಿದೆ.


**Help The Gorakshana**

— Humanitarian Propoganda Monthly....

**SHAKTI**

**SUDHA**

**A Superb Tonic**

**Protect the Cow**

**Contribute Liberally to the National Defence Fund**

Quality Printing Neat Binding

**Lakshminarasimha Press**

Sivarampet, Mysore 1



ವುಡ್‌ಲಾಂಡ್ಸ್ 11 10 74 ರಿಂದ

ಅಮೋಘ 4 ನೇ ವಾರ

ಇಮ್ತಿಹಾನ್ ● Imtihan

★ ತನುಜ ★ ವಿನೋದ ಖನ್ನ ★ ಬಿಂದು

ಅಭಿನಯಿಸಿರುವ ಅಮೋಘ ಹಿಂದಿ ವರ್ಣಕಂಚಿತ ಕಲಾಕೃತಿ

ನಿರ್ದೇಶನ – ಮದನ್ ಸಿಂಹ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ 3 ಪ್ರದರ್ಶನಗಳು

ಅಪೆರಾ 4 ನೇ ವಾರ

ನೇಟ್ರು ಇಂಡ್ರು ನಾಳೈ

ಎಂ. ಜಿ. ರಾಮಚಂದ್ರನ್ ಅಭಿನಯಿಸಿರುವ ಮಹೋನ್ನತ ಈಸ್ಟ್‌ಮನ್ ಕಲರ್ ತಮಿಳು ಚಿತ್ರ

ನಿರ್ದೇಶನ – ಪಳನಿ ನೀಲಕಂಠನ್

ಪಾತ್ರ – ಮಂಜುಳ ಅಶೋಕನ್ ರಾಜಶ್ರೀ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ


Edited Printed and Published by Dharmapuchharanirata M S. Krishna Rao ( Proprietor ) at the Satyavadi Press, Chamaraja puram Mysore